# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1906 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ ಮಹಿಳಾ ಉದ್ಯಮಿಗಳು ನಡೆಸುತ್ತಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಜುಲೈ 2020 ರಿಂದ ಎಂ.ಎಸ್.ಎಂ.ಇ ಉದ್ಯಮಗಳ ನೋಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದೆ.<br>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಜುಲೈ-2020 ರಿಂದ ಫೆಬ್ರುವರಿ-2026ರ ಅಂತ್ಯದವರೆಗೆ ಮೈಸೂರು ಜಿಲ್ಲೆಯಲ್ಲಿ ನೋಂದಣಿಯಾಗಿರುವ ಮಹಿಳಾ ಉದ್ಯಮಿಗಳ ಒಟ್ಟು ಎಂ.ಎಸ್.ಎಂ.ಇ ಘಟಕಗಳ ಸಂಖ್ಯೆ ಕೆಳಕಂಡಂತಿದೆ. |

| ಸೂಕ್ಷ್ಮ | ಸಣ್ಣ | ಮಧ್ಯಮ | ಒಟ್ಟು |
|---|---|---|---|
| 42065 | 209 | 4 | 42278 |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಆ) | ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ನೋಂದಣಿಯಾದ ಮಹಿಳಾ ಉದ್ಯಮಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು); | ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಕಳೆದ 03 ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ನೋಂದಣಿಯಾದ ಮಹಿಳಾ ಉದ್ಯಮಿಗಳ ತಾಲ್ಲೂಕುವಾರು ಎಂ.ಎಸ್.ಎಂ.ಇ ಘಟಕಗಳ ಸಂಖ್ಯೆ ಈ ಕೆಳಕಂಡಂತಿದೆ |

| ಕ್ರ. ಸಂ | ತಾಲ್ಲೂಕು | 2023-24 | 2024-25 | 2025-26 |
|---|---|---|---|---|
| 1 | ಹೆಚ್.ಡಿ.ಕೋಟೆ | 412 | 178 | 472 |
| 2 | ಹುಣಸೂರು | 728 | 343 | 536 |
| 3 | ಕೆ ಆರ್ ನಗರ | 524 | 180 | 437 |
| 4 | ಮೈಸೂರು | 6223 | 2009 | 3711 |
| 5 | ನಂಜನಗೂಡು | 789 | 389 | 742 |
| 6 | ಪಿರಿಯಾಪಟ್ಟಣ | 337 | 180 | 383 |
| 7 | ಟಿ ನರಸೀಪುರ | 850 | 181 | 271 |
| | **ಒಟ್ಟು** | **9863** | **3460** | **6552** |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಇ) | ಮೈಸೂರಿನ ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ (ಕಡಕೊಳ, ತಾಂಡ್ಯ, ಕೂರ್ಗಳ್ಳಿ) ಮಹಿಳಾ ಉದ್ಯಮಿಗಳಿಗಾಗಿಯೇ ಮೀಸಲಿಟ್ಟ ವಿಶೇಷ ಪ್ಲಾಟ್‌ಗಳ ಸಂಖ್ಯೆ ಎಷ್ಟು ಮತ್ತು ಅವುಗಳಲ್ಲಿ ಎಷ್ಟು ಪ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿದೆ; | ಮೈಸೂರು ಜಿಲ್ಲೆಯಲ್ಲಿನ ಕಡಕೊಳ, ತಾಂಡ್ಯ ಮತ್ತು ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಮಹಿಳಾ ಉದ್ಯಮಿಗಳಿಗಾಗಿ ಯಾವುದೇ ನಿವೇಶನಗಳನ್ನು ಮೀಸಲಿರಿಸಿರುವುದಿಲ್ಲ. ಮಹಿಳಾ ಉದ್ಯಮಿದಾರರಿಗಾಗಿಯೇ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಮಹಿಳಾ ಉದ್ಯಮಿ ಪಾರ್ಕ್-1 & 2 ರಲ್ಲಿ ಒಟ್ಟು 193 ನಿವೇಶನಗಳು ಅಭಿವೃದ್ಧಿ ಪಡಿಸಲಾಗಿರುತ್ತದೆ ಮತ್ತು 193 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. |
| ಈ) | ಕಳೆದ ಮೂರು ವರ್ಷಗಳಲ್ಲಿ 'ಉದ್ಯೋಗಿನಿ' ಮತ್ತು 'CMEGP' ಯೋಜನೆಗಳಡಿ ಮೈಸೂರು ಜಿಲ್ಲೆಯ ಎಷ್ಟು ಮಹಿಳಾ ಫಲಾನುಭವಿಗಳಿಗೆ ಸಬ್ಸಿಡಿ ಮಂಜೂರು ಮಾಡಲಾಗಿದೆ; | ಕಳೆದ ಮೂರು ವರ್ಷಗಳಲ್ಲಿ 'ಉದ್ಯೋಗಿನಿ' ಮತ್ತು 'CMEGP' ಯೋಜನೆಗಳಡಿ ಮೈಸೂರು ಜಿಲ್ಲೆಯ ಮಹಿಳಾ ಫಲಾನುಭವಿಗಳಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಯಾವುದೇ ಸಬ್ಸಿಡಿ ಮಂಜೂರು ಮಾಡಿರುವುದಿಲ್ಲ ಹಾಗೂ ನಿಗಮದಿಂದ ಯಾವುದೇ ಸಾಲ ಸೌಲಭ್ಯಗಳನ್ನು |

| | | |
|---|---|---|
| | ಬ್ಯಾಂಕ್‌ಗಳು ಸಾಲ ನೀಡಲು ವಿಳಂಬ ಮಾಡುತ್ತಿರುವುದರಿಂದ ನೂರಾರು ಅರ್ಜಿಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೀಡುತ್ತಿರುವುದಿಲ್ಲ. CMEGP ಯೋಜನೆಯನ್ನು ಈಗಾಗಲೇ ಸ್ಥಗಿತಗೊಳಿಸಲಾಗಿರುತ್ತದೆ. |
| ಉ) | ಮೈಸೂರು ರೇಷ್ಮೆ (Mysuru Silk) ಶ್ರೀಗಂಧದ ಕಲೆ ಮತ್ತು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಕಲಾ ಸಂಕೀರ್ಣಗಳಿಂದ ಕುಶಲಕರ್ಮಿಗಳ ಉತ್ಪನ್ನಗಳನ್ನು, ಶ್ರೀಗಂಧದ ನೋಂದಾಯಿತ ಕರಕುಶಲಕರ್ಮಿಗಳು ತಯಾರಿಸುವ ಶ್ರೀಗಂಧದ ಕಲಾಕೃತಿಗಳನ್ನು ಹಾಗೂ ಬೀಟೆ ಮರದ ಕಲಾಕೃತಿಗಳನ್ನು ಖರೀದಿಸಿ ನಿಗಮದ 11 ಕಾವೇರಿ ಮಾರಾಟ ಮಳಿಗೆಗಳಲ್ಲಿ ಹಾಗೂ ಆನ್ ಲೈನ್ ಪ್ಲಾಟ್‌ಫಾರ್ಮ್ ಗಳಲ್ಲಿ ಪ್ರದರ್ಶನ ಮತ್ತು ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>ನಿಗಮದ ವತಿಯಿಂದ ಸದರಿ ಕರಕುಶಲಕರ್ಮಿಗಳು ಭಾರತದಲ್ಲಿ ನಡೆಯುವ ವಸ್ತು ಪ್ರದರ್ಶನ ಕಾರ್ಯಕ್ರಮಗಳಾದ ಮೈಸೂರು ದಸರಾ ಮಹೋತ್ಸವ, ಭಾರತ್‌ಟೆಕ್ಸ್, ಲೋಕ್ ಸಂವರ್ಧನ್ ಪರ್ವ್, ವಿವಿಧತಾ ಕ ಅಮೃತ್ ಮಹೋತ್ಸವ, ಇಂಡಿಯ ಮಾರಿಟೈಮ್ ವೀಕ್-2025, ಭಾರತ ಅಂತರಾಷ್ಟ್ರೀಯ ವ್ಯಾಪಾರ ಮೇಳ (IITF)2025, ಜಿಐ ಮಹೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ. |
| ಊ) | ಮೈಸೂರು ಪ್ರವಾಸೋದ್ಯಮ ಕೇಂದ್ರವಾಗಿರುವುದರಿಂದ, ಪ್ರವಾಸಿ ತಾಣಗಳ ಬಳಿ ಮಹಿಳಾ ಉದ್ಯಮಿಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ 'ಮಹಿಳಾ ಕೈಗಾರಿಕಾ ಸಂಕೀರ್ಣ' ಅಥವಾ 'ಶಾಶ್ವತ ಮಾರಾಟ ಮಳಿಗೆ'ಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ಪ್ರವಾಸಿ ತಾಣಗಳ ಬಳಿ ಮಹಿಳಾ ಉದ್ಯಮಿಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ 'ಮಹಿಳಾ ಕೈಗಾರಿಕಾ ಸಂಕೀರ್ಣ' ಅಥವಾ 'ಶಾಶ್ವತ ಮಾರಾಟ ಮಳಿಗೆ' ಸ್ಥಾಪಿಸುವ ಬಗ್ಗೆ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ. |

ಸಿಐ 124 ಸಿಎಸ್‌ಸಿ 2026

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.